# 20

# ಬೇಕೆಂದು ಮಾಡುವ ಪಾಪದ ವಿಷಯದಲ್ಲಿ ಎಚ್ಚರವಾಗಿರಿ

# (10:26-31)

ಆರಂಭದಲ್ಲಿ, ಇಬ್ರಿಯ 6:4-8ರಲ್ಲಿ, ಭ್ರಷ್ಟತೆ ಹಾಗೂ ಅದರ ಪರಿಣಾಮಗಳ ಕುರಿತು ಬರಹಗಾರನು ತಿಳಿಸಿರುವನು. ಇಬ್ರಿಯ 10:26-31ರಲ್ಲಿ, ಪುನಃ ಆವಿಚಾರವನ್ನು ಪ್ರಸ್ತಾಪಿಸಲಾಗಿದೆ. ಈ ಪಾಠದಲ್ಲಿ "ಬೇಕೆಂದು ಮಾಡುವ ಪಾಪದ ವಿಷಯದಲ್ಲಿ *ನಾನು ಚರ್ಚಿಸುತ್ತಿದ್ದೇನೆ*" (10:26ಎ; ಒತ್ತಿ ಹೇಳಿದ್ದು ನನ್ನದು). ನಾನು ಈ ಮೇಲಿನ ತಲೆಬರಹವನ್ನೇ ನೀಡಿದ್ದೇನೆ!

## "ಬೇಕೆಂದು ಮಾಡುವ ಪಾಪದ" ಕುರಿತ ಅರ್ಥ

ಕೆಥೋಲಿಕರು ಈ ಪಾಪದ ಕುರಿತು "ಮಾರಕ" ಹಾಗೂ ಮಾರಕವಲ್ಲದ ಎಂಬ ಎರಡು ವಿಭಜನೆಯನ್ನು ಮಾಡಿರುವರು, ಅದರಲ್ಲಿ "ಮಾರಕವಾಗುವ" ಪಾಪವು ಅತಿಗಂಭೀರ ವಾದದ್ದು. ಸಾಮಾನ್ಯವಾಗಿ ಪಾಪವು, ಪಾಪವೇ ಆಗಿರುತ್ತದೆ, ಅದಕ್ಕಾಗಿ ಮಾನಸಾಂತರ ಪಡದೆ ಹೋದರೆ ಅದು ನಾಶನವನ್ನು ತರುತ್ತದೆ. ಹೇಗೂ ನಾವುಗಳು ಮೂಲ *ಪಾಪ* ಹಾಗೂ ಬೇಕೆಂದು ಮಾಡುವ ಪಾಪದ ನಡುವಿನ ವ್ಯತ್ಯಾಸವನ್ನು ಅರಿಯಬೇಕು.

ಬೇಕೆಂದು ಮಾಡುವ ಪಾಪ ಅಂದರೇನು? ಮೊದಲನೆಯದಾಗಿ, ಅದು ಭಯಂಕರವಾದ ಪಾಪವಾಗಿದೆ. "ಬೇಕೆಂದು" ಎಂದರೆ NASB ಯಲ್ಲಿ "ಉದ್ದೇಶಿತ ಪಾಪ" NIV ಯಲ್ಲಿ ವಿಶೇಷ ಪದವನ್ನು ಬಳಸಲಾಗಿದೆ. ನಮ್ಮ ಪಠ್ಯಭಾಗದ ಪ್ರಕಾರ, "ಸತ್ಯದ ಪರಿಜ್ಞಾನವನ್ನು" ಹೊಂದಿರುವವನು ಮಾಡುವದು ಬೇಕೆಂದು ಮಾಡುವ ಪಾಪವಾಗಿದೆ (ವಚನ 26ಬಿ). ಸತ್ಯವೇದದಿಂದ, ಪಾಪದ ಪರಿಣಾಮಗಳನ್ನು ಬೋಧಿಸುವವನೇ ತನ್ನ ಬೋಧನೆಯನ್ನು ಮರೆತು ಪಾಪವನ್ನು ಆಯ್ಕೆ ಮಾಡಿಕೊಳ್ಳುವ ಕ್ರಿಯೆಯಾಗಿರುತ್ತದೆ. ಅದು ಉದ್ದೇಶಿತ, ಹಾಗೂ ಅವಿಧೇಯತೆ, ಇದನ್ನು ಹಳೆ ಒಡಂಬಡಿಕೆಯಲ್ಲಿ "ಗರ್ವ" ಎಂದು ಕರೆಯಲಾಗಿದೆ (ನೋಡಿರಿ ಕೀರ್ತನೆ 19:13).

"ಬೇಕೆಂತಲೇ" ಅಂದರೆ ಪೂರ್ಣ ಇಚ್ಛೆಯಿಂದ - ಒಬ್ಬ ತನ್ನ ಒಪ್ಪುವಿಕೆಯಿಂದ, ತನ್ನ ಮಾರ್ಗದಲ್ಲಿಯೇ ಈಡೇರಿಸುವ ಉದ್ದೇಶ. ಪಾಪದ ಕುರಿತಾಗಿ ಹೇಳುವದಾದರೆ ಅದರಲ್ಲಿ ದೇವರ ಪಾತ್ರವಿರುವುದೇ ಇಲ್ಲ. "ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ" ಎನ್ನುವ ಬದಲು (ಲೂಕ 22:42), ಪಾಪ ಮಾಡುವವನು "ನನ್ನ ಚಿತ್ತವೇ ಹೊರತು ನಿನ್ನ ಚಿತ್ತವಲ್ಲ!" ಎಂದು ಹೇಳುವನು.

ದೇವರು ಮನುಷ್ಯನನ್ನು ಸ್ವಚ್ಛಂದದ ಭಾವದಲ್ಲಿ ಉಂಟು ಮಾಡಿರುವದರಿಂದ, ಮಾನವನ್ನು ಉದ್ದೇಶಿತ ಪಾಪಗಳನ್ನು ಮಾಡುತ್ತಾನೆ ಎಂಬ ವಾದವೂ ಇರಬಹುದು. ಆದರೆ ಇದು ಒಂದು ತಾತ್ಕಾಲಿಕವಾದ ಕಾರ್ಯವಾಗಿರದೇ, ಮುಂದುವರೆಯುವ ಕ್ರಿಯೆಯಾಗಿರುತ್ತದೆ ಈ ವಿಚಾರವನ್ನು NASB ತರ್ಜುಮೆಯಲ್ಲಿ ವರ್ತಮಾನವನ್ನು ಗ್ರೀಕ್‌ನ ಕ್ರಿಯಾಪದದಲ್ಲಿ ತರ್ಜುಮೆ ಮಾಡಲಾಗಿದೆ: "ಪಾಪವನ್ನು ಉದ್ದೇಶಿತವಾಗಿ *ಮುಂದುವರೆಸುವನು.*" NIVಯಲ್ಲಿ, ಪಾಪವನ್ನು ಯಾವಾಗಲೂ ಮಾಡುತ್ತಿರುವವನು ಎಂದಿದೆ (ಒತ್ತಿ ಹೇಳಿದ್ದು ನನ್ನದು). ಇಲ್ಲಿ

ದೇವರಿಗೆ ವಿರೋಧವಾದ ಪಾಪದ ಕುರಿತು ಹೇಳುತ್ತಿರುವದಿಲ್ಲ.

ಈ ಎಲ್ಲಾ ಪಾಪಗಳನ್ನು ಗಲಾತ್ಯ 5:19-21ರ, ಪಟ್ಟಿಗೆ ಸೇರಿಸಲಾಗದು, ಅದು ಕೆಲವನ್ನು "ಉದ್ದೇಶಿತ" ಹಾಗೂ "ಉದ್ದೇಶ ಪೂರ್ವಕ"ವಲ್ಲದ ಗುಂಪಿಗೆ ಸೇರಿ ಸಲಾಗುದು "ಉದ್ದೇಶಿತ ಪಾಪವನ್ನು" ಏನು ಮಾಡಲಾಗಿದೆ ಎಂದಿರದೆ, ಅದನ್ನು ಏಕೆ ಮಾಡಲಾಯಿತು ಎಂದು ಹೇಳ ಲಾಗಿದೆ. ಅವಿಧೇಯ ಹೃದಯದ ಪ್ರತಿಬಿಂಬ "ಉದ್ದೇಶಿತ" ಪಾಪವಾಗಿದೆ.

## ಉದ್ದೇಶಿತ ಪಾಪದ ಅಪಾಯಗಳು

ಉದ್ದೇಶಿತ ಪಾಪದ ಕುರಿತು ಏಕೆ ಯೋಚಿಸಬೇಕು? 10ನೇ ಅಧ್ಯಾಯದ ಅಂತ್ಯದಲ್ಲಿ ಇರದ ಪರಿಣಾಮಗಳನ್ನು ತಿಳಿಸಲಾಗಿದೆ.

### 1. ಅದು ದೇವರಿಗೆ ಅವಮಾನವಾಗಿದೆ

ಉದ್ದೇಶಿತ ಪಾಪವು ದೇವರಿಗೆ ಅವಮಾನ ಉಂಟುಮಾಡುತ್ತದೆ ಎಂದು, ನಮ್ಮ ಪಾಠದ ಅಂತ್ಯದಲ್ಲಿ ತಿಳಿಸಲಾಗಿದೆ (ವಚನಗಳು 29, 31). "ಯಾವನಾದರೂ ಮನಃ ಪೂರ್ವಕವಾಗಿ ಹಟದಿಂದ ಪಾಪವನ್ನು ಮಾಡಿದರೆ ಅವನು ಕರ್ತನನ್ನು ದೂಷಿಸಿದವನಾದ್ದರಿಂದ ಕುಲದಿಂದ ತೆಗೆದು ಹಾಕಲ್ಪಡಬೇಕು" ಎಂದು ಹಳೆ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ (ಅರಣ್ಯಕಾಂಡ 15:30).

### 2. ಕ್ರಿಸ್ತನ ಯಜ್ಞವನ್ನು ನಿರಾಕರಿಸುತ್ತದೆ

ಹೌದು, ಹಟದಿಂದ ಮಾಡಿದ ಪಾಪವು ಕ್ರಿಸ್ತನ ಯಜ್ಞವನ್ನು ನಿರಾಕರಿಸುತ್ತದೆ (ವಚನಗಳು 26; ಇದನ್ನು ನೋಡಿರಿ 29). "ಅರ್ಥಗರ್ಭಿತವಾದ ಒಂದೇ ಒಂದು ಯಜ್ಞವಿದೆ, ಒಬ್ಬನು ಅದನ್ನು ತಿರಸ್ಕರಿಸುವದಾದರೆ, ಸಹಾಯಕ್ಕಾಗಿ ಇನ್ನ್ಯಾವುದೇ ಯಜ್ಞವು ಅವನಿಗಾಗಿ ಇರುವದಿಲ್ಲ."[1]

### 3. ಅವನು ರಕ್ಷಣೆಯನ್ನು ಕಳೆದುಕೊಳ್ಳುವನು

ಉದ್ದೇಶಿತ ಪಾಪವು, ಆತ್ಮೀಕ ದುರ್ಘಟನೆಯನ್ನು ತರುತ್ತದೆ (ವಚನಗಳು 26-31). ಧರ್ಮೋಪದೇಶಕಾಂಡ 32ರ ಉಲ್ಲೇಖವನ್ನು ನಮ್ಮ ಪಠ್ಯದಲ್ಲಿ ತಿಳಿಸಲಾಗಿದೆ. ಪ್ರಮುಖವಾಗಿ ಅದನ್ನು ದೇವರ ವೈರಿಗಳಿಗಾಗಿ ತಿಳಿಸಲಾಗಿದೆ, ಅದಾಗ್ಯೂ ದೇವ ಜನರು ಸಹ ಅದರಿಂದ ತಪ್ಪಿಸಿಕೊಳ್ಳಲಾರರು. ಕ್ರೈಸ್ತರು ಸಹ ಈ ತೀರ್ಪಿನ ವಿಚಾರದಿಂದ ಹೊರತಾಗಿರುವದಿಲ್ಲ.

ಬೇಕೆಂದು ಮಾಡುವ ಈ ಪಾಪಕ್ಕಾಗಿ ನಾನು ಮಾನಸಾಂತರ ಪಟ್ಟರೆ ಅದಕ್ಕೆ ಕ್ಷಮಾಪಣೆ ಇಲ್ಲವೇ ಎಂದು ಒಬ್ಬನು ಪ್ರಶ್ನಿಸಬಹುದು? ಈ ರೀತಿ ಭಾವಿಸಿ ಪಾಪ ಮಾಡುವದು ಅಪಾಯಕರವಾಗಿರುತ್ತದೆ. ನಾನು ಉದ್ದೇಶಿತವಲ್ಲದ ಪಾಪವನ್ನು ಮಾಡುವಾಗ, "ದೇವರೇ ನನ್ನನ್ನು" ಕ್ಷಮಿಸು ಎಂದು ನಮ್ಮ ಅಂತಾರಾಳವು ಮೊರೆಯಿಡುತ್ತದೆ! ಆದರೆ ಉದ್ದೇಶಿತ ಪಾಪ ಮಾಡುವವನಿಗೆ ಈ ವಿಧವಾದ ಮಾನಸಾಂತರವಾಗುವ ಸಾಧ್ಯತೆಗಳಿರುವದಿಲ್ಲ. ಒಬ್ಬನು ಈ ವಿಧವಾಗಿ ದೇವರಿಗೆ ದ್ರೋಹ ಮಾಡುವಾಗ, ಅವನು ಮುರಿದ ಹೃದಯಿಯಾಗಿ ದೇವರ ಮುಂದೆ ಮಾನಸಾಂತರದಿಂದ ಅಡ್ಡಬೀಳಲು ಸಾಧ್ಯವೇ?

## ಮುಕ್ತಾಯ

ಈ ಪಠ್ಯ ಭಾಗದಲ್ಲಿ ಉದ್ದೇಶಿತ ಹಾಗೂ ಉದ್ದೇಶಿತವಲ್ಲದ ಪಾಪದ ಬಗ್ಗೆ ನಾನು ಚರ್ಚಿಸಿರುವೆನು. ಯಾವುದೇ ಪಾಪವನ್ನು ಮಾಡಬಹುದು ಎಂಬ ತಾತ್ಪರ್ಯವನ್ನು ನಾನು ಹೇಳುತ್ತಿರುವದಿಲ್ಲ. ಉದ್ದೇಶಿತ ಪಾಪವನ್ನು ಒಬ್ಬನು ಹೇಗೆ ಮಾಡಬಹುದು? ಈ ಪಾಪಗಳ

ಕುರಿತು ಅವನು ಗಂಭೀರತೆಯನ್ನು ಹೊಂದದೆ ಇರುವ ಕಾರಣದಿಂದಲೇ, ಪಾಪ ಮಾಡದಂಥ ಹೃದಯವನ್ನು ಹೊಂದುವದರಿಂದಲೇ ವಚನ 39ರಲ್ಲಿ, ಭರವಸೆಯ ವಾಕ್ಯವುಂಟು, ನಮ್ಮ ಪಾಠದಲ್ಲಿ ತಿಳಿಸಿರುವಂತೆ, ಅಂತಹ ಹೀನ ಸ್ಥಿತಿಗೆ ಅವರಿನ್ನೂ ಇಳಿದು ಹೋಗಿರಲಿಲ್ಲ. ಆದರೆ ಅವರು ಇದ್ದಂತ ಸ್ಥಿತಿಯಲ್ಲಿಯೇ ಮುಂದುವರೆದರೆ, ಅವರ ಪರಿಸ್ಥಿತಿ ಸರಿಯಾಗದೆ ಇರಬಹುದಿತ್ತು! ಈ ಸಂಗತಿಯು, ನಮ್ಮ ಹೃದಯಗಳನ್ನು ಪರಿಶೀಲಿಸಿಕೊಳ್ಳುವಂತೆ ಮಾಡುತ್ತದೆ: ಮಾನಸಾಂತರ ಪಡದೆ ಇರುವ ಯಾವುದಾದರು ಪಾಪಗಳು ನಮ್ಮಲ್ಲಿವೆಯೇ? ಹಾಗಿದ್ದರೆ, ದೇವರು ಮನಪೂರ್ವಕವಾದ ಮಾನಸಾಂತವನ್ನು ನೀಡಲಿ.

---

ಟಿಪ್ಪಣಿ

[1]J. D. Thomas, *Hebrews and James,* The Way of Truth: Message of the New Testament series (Abilene, Tex.: ACU Press, 1989), 50.